'ಗೊತ್ತಾದರೆ ಆಗಲಿ. ಆದರೆ ಅದನ್ನು ಗೊತ್ತು ಮಾಡಿಸುವ ಉದ್ದೇಶ ನನಗಿಲ್ಲ.'

'ಹಾಗಿದ್ದರೆ ನಿಮ್ಮ ಉದ್ದೇಶವೇನು?'

'ನನಗ್ಯಾವುದೇ ಉದ್ದೇಶವಿಲ್ಲ.'

'ಸಂಬಂಧಗಳಿಂದ ನುಣುಚಿಕೊಳ್ಳುವ ಸುಲಭದ ಉತ್ತರ ಇದು. ಇಂಥ ಸುಲಭದ ಹಾದಿ ಹಿಡಿದವರಿಗೆ ಸತ್ಯ ಗೊತ್ತಾಗೋದೇ ಇಲ್ಲ. ಅದಕ್ಕೇ ನೀವು ಪ್ರೇಮ ಅಂದರೆ ಏನು ಅಂತ ಗೊತ್ತಿಲ್ಲ ಅನ್ನುತ್ತೀರ. ಸರಳ ಅನ್ನಿಸಿದರೂ ನಾನು ಇದುವರೆಗೆ ಯಾರನ್ನೂ ಪ್ರೀತಿಸಿಲ್ಲ ಅನ್ನುವ ಸತ್ಯ ನನಗೆ ಗೊತ್ತಿದೆ. ನೀವು ಸುಮ್ಮನೆ ಎಲ್ಲದರಿಂದ ತಪ್ಪಿಸಿಕೊಂಡು ಓಡುತ್ತಿದ್ದೀರ. ಹಾಗೆ ತಪ್ಪಿಸಿಕೊಳ್ಳುವ ಒಂದು ದಾರಿ ನಿಮ್ಮನ್ನು ನನ್ನ ಬಳಿ ಕರೆತಂದಿದೆ. ನನಗೆ ಮದುವೆ ಆಗಿರದಿದ್ದರೂ ನಿಮಗೆ ಮದುವೆ ಆಗಿರದಿದ್ದರೂ ಇದು ಬೇರೆಯದೇ ರೀತಿ ಇರುತ್ತಿತ್ತು ಅಂತ ನನಗಂತೂ ಅನ್ನಿಸುವುದಿಲ್ಲ. ಮದುವೆ ಆಗಿರುವುದರಿಂದಲೇ ನಮಗಿದನ್ನು ಹೀಗೆ ಸ್ವೀಕರಿಸಲು ಸಾಧ್ಯವಾಗಿದೆ' ಅವಳ ಮಾತಿನಲ್ಲಿ ಆಕ್ಷೇಪಣೆಯಿರಲಿಲ್ಲ. ನಿರುಮ್ಮಳ ನಿವೇದನೆಯಿತ್ತು.

ಜ್ಯೋತ್ಸ್ನಾ ಮಾತು ಮುಂದುವರಿಸುತ್ತ, 'ಇದನ್ನು ನಾನು ಹೇಳಬಹುದೋ ಹೇಳಬಾರದೋ ಗೊತ್ತಿಲ್ಲ...' ಎಂದು ತಡೆದಳು.

'ಹೇಳಿ.'

'ಒಂದು ವೇಳೆ ನೀವು ಈಗ ನನ್ನೊಂದಿಗೆ ಹೀಗೆ ಬೆತ್ತಲಾಗಿ ಇರುವಂತೆಯೇ ಇಲ್ಲವಾಗಿ ಹೋದರೆ?'

ನೀಲೇಶ್ ಜೋರಾಗಿ ನಗಾಡಿದ. 'ಈ ಯೋಚನೆ ನನಗೆ ಬಂದಿಲ್ಲ ಅಂದುಕೊಂಡಿದ್ದೀರ?' ಎಂದು, ಕೊಂಚ ತಗ್ಗಿದ ದನಿಯಲ್ಲಿ, 'ಅದಕ್ಕಿಂತಲೂ ಭೀಕರವಾದ ಆಲೋಚನೆ ಬರುತ್ತದೆ... ಏನೆಂದರೆ... ಇದು... ಈಗ ನಮ್ಮ ನಡುವೆ ನಡೆಯುತ್ತಿರುವುದು ಯಾವುದೋ ಸಿನಿಮಾದ ಶೂಟಿಂಗ್ ಆಗಿದ್ದರೆ? 'ಕಟ್ ಕಟ್... ಪ್ಯಾಕಪ್' ಎನ್ನುವ ದನಿ ಕೇಳುತ್ತಿದೆ. ನಾನು ಹಾಗೇ ಮಲಗಿದ್ದೇನೆ. ಯಾರೋ ಬಂದು ಈ ಹೊದಿಕೆಯನ್ನು ಎಳೆಯುತ್ತಾರೆ. ನಾನು ಮುಜುಗರದಿಂದ ಹಿಂಜಿಕೊಳ್ಳುತ್ತೇನೆ. ನಗ್ನತೆಯನ್ನು ಮುಚ್ಚಿಕೊಳ್ಳಲು ಪ್ರಯತ್ನಿಸುತ್ತೇನೆ. ಆದರೆ ಯಾರಿಗೂ ಅದರ ಬಗ್ಗೆ ಗಮನವೇ ಇಲ್ಲ. ನನ್ನ ಬೆತ್ತಲು ಈ ಜಗತ್ತಿಗೆ ಬೇಕಾಗಿಯೇ ಇಲ್ಲ. ಹೊದಿಕೆಯನ್ನು ಎಳೆದವನು ಅದನ್ನು ಮಡಚಿಟ್ಟು ಹೊರಡುತ್ತಾನೆ. ಯೂನಿಟ್ಟಿನ ಹುಡುಗರು ಅತ್ತಿಂದಿತ್ತ ಓಡಾಡುತ್ತಿದ್ದಾರೆ. ನಿರ್ದೇಶಕ ಇದೆಲ್ಲ ಸರಿಯಾಗಿ ಮೂಡಿ ಬಂದಿದೆಯೇ ಇಲ್ಲವೇ ಎನ್ನುವುದನ್ನು ಮಾನಿಟರ್ ನೋಡುತ್ತ ಕೂತಿದ್ದಾನೆ. ಪ್ರೊಡಕ್ಷನ್ ಮ್ಯಾನೇಜರ್ ಹಣದ ಲೆಕ್ಕಾಚಾರದಲ್ಲಿ ಮುಳುಗಿದ್ದಾನೆ. ಪಕ್ಕದಲ್ಲಿ ನೀವು ಕಾಣುತ್ತಿಲ್ಲ... ನನ್ನನ್ನು ಒಂಟಿಯಾಗಿ ಬಿಟ್ಟು ಯಾವಾಗಲೋ ಎದ್ದು ಹೋಗಿದ್ದೀರ... ಮತ್ತೆ, ಏನೂ ಆಗಿಯೇ ಇಲ್ಲವೆನ್ನುವಂತೆ ಅಲ್ಲೆಲ್ಲೋ ಮೇಕಪ್ ಕಳಚುತ್ತ ಕುಳಿತಿದ್ದೀರ...'

ಇನ್ನೊಂದೇ ಒಂದು ಮಾತನ್ನಾಡಬೇಡ ಎನ್ನುವಂತೆ ಜ್ಯೋತ್ಸ್ನಾ ನೀಲೇಶನನ್ನು ದೀರ್ಘವಾಗಿ ಚುಂಬಿಸತೊಡಗಿದಳು.


## ವಿಕ್ರಂ ಹತ್ವಾರ್

ಹೊಸ ತಲೆಮಾರಿನ ಮಹತ್ವದ ಕತೆಗಾರ ವಿಕ್ರಂ 'ಜೀರೋ ಮತ್ತು ಒಂದು' ಎಂಬ ಕಥಾ ಸಂಗ್ರಹ ಹಾಗೂ 'ಇದೇ ಇರಬೇಕು ಕವಿತೆ', 'ಅಕ್ಷೀ... ಎಂದಿತು ವೃಕ್ಷ!' ಎಂಬ ಕವನ ಸಂಗ್ರಹಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಉದ್ಯೋಗಿ.